ಅಸಲು ದಾವಾ ನಂಃ 22/2023
ಡಿ ಡಬ್ಲ್ಯುಃ1

<u>ದಿನಾಂಕಃ **20-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂಎನ್ಎಸ್ ವಕೀಲರಿಂದಃ</u>

ನಾನು ಮೊದಲು ಪತ್ರ ವ್ಯವಹಾರಗಳಿಗೆ ಸಹಿ ಮಾಡುತ್ತಿದ್ದೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ, ಆದರೆ ಸಹಿ ಮಾತ್ರ ಮಾಡುತ್ತೇನೆ. ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಗಿ ನಿಪಿ-1 ರಲ್ಲಿ ನಿಮ್ಮ ಸಹಿ ಇರುತ್ತದೆ ಎಂದರೆ ಸಾಕ್ಷಿ ಕಾಣುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾವು ಪ್ರತಿವಾದ ಪತ್ರವನ್ನು ಸೃಷ್ಟಿ ಮಾಡಿಕೊಂಡು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಮೂಲ ದಾವಾ ಸಂಖ್ಯೆಃ 12/2022 ಅನ್ನು ನಾವು ಸೃಷ್ಟಿ ಮಾಡಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾವು ಮೂಲ ದಾವೆ 12/2022 ಅನ್ನ್ನು ನಾವು ನನ್ನ ಮಗನಿಗೆ ಒಪ್ಪಿಗೆ ಕೊಡುವಂತೆ ಹೇಳಿ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆ ಹೂಡುವ ಕಾಲಕ್ಕೆ ಗಿರೀಶ್ ಇವರು ದಾಖಲೆಗಳನ್ನು ತಂದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ ಮತ್ತು ಅವರ ಗಂಡನಿಗೆ ಬಂದ ಆಸ್ತಿಯನ್ನು ಅಬಿವೃದ್ದಿ ಪಡಿಸಿದ್ದು ಸದರಿ ಆಸ್ತಿಯನ್ನು ಕಬಳಿಸುವ ಸಲುವಾಗಿ ಮೂಲ ದಾವೆ ಸಂಖ್ಯೆಃ 12/2022 ಅನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ರಾಜಿಯಲ್ಲಿ ಗಿರೀಶ್ ಇವರಿಗೆ ಬಂದ ಆಸ್ತಿ ಅನುಪಯುಕ್ತ ಆಸ್ತಿ ಇತ್ತು ಎಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆಃ 12/2022 ರಲ್ಲಿ ಪ್ರತಿವಾದಿಯರು ತಕರಾರನ್ನು ತಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ಸಲ್ಲಿಸಿರುತ್ತಾರೆ ಪ್ರತಿವಾದಿಯರು ತಕರಾರು ಸಲ್ಲಿಸದೇ ಇದ್ದರೂ ಸಹ ಸಲ್ಲಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2.ಮೂಲ ದಾವೆ ಸಂಃ 12/2022 ರಲ್ಲಿ 1 ನೇ ಪ್ರತಿವಾದಿಗೆ ಬಂದ ಭಾಗದ ಆಸ್ತಿಯಲ್ಲಿ ಅರ್ಧ ಭಾಗದ ಹಕ್ಕು ಅವರ ಮಗನಾದ ವಾದಿ 1 ರವರಿಗೆ ಹಕ್ಕು ಇದ್ದು ಅದನ್ನು ಮೊಟಕುಗೊಳಿಸುವ ಸಲುವಾಗಿ ಆ ದಾವೆಯಲ್ಲಿ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಯಲ್ಲ. ನಾವು ಈ ದಾವೆಯ ವಾದಿಯರಿಗೆ ಮೋಸ ಮಾಡುವ ಸಲುವಾಗಿ ಮೂಲ ದಾವೆ ಸಂಖ್ಯೆಃ 12/2022 ಅನ್ನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆಃ 12/2022 ಕ್ಕೆ ಯಾವುದೇ ವ್ಯಾಜ್ಯ ಕಾರಣ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯಾಜ್ಯ ಕಾರಣವನ್ನು ನಾವು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮೂಲ

ದಾವೆ ಸಂಖ್ಯೆಃ 12/2022 ಅನ್ನು ಸಲ್ಲಿಸಲು ಯಾವುದೇ ವಿವಾದ ಇರಲಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಹೂಡಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ